Fax: 08282-256262
E-mail:kuvempuacademic@gmail.com

Phone No - 08282-256149
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

ಸಂಖ್ಯೆ:ಕುವಿ:ಶೈವಿ:ಎಸಿ-4:123ಬಿ: 1541 :2022–23 ದಿನಾಂಕ:07–07–2022

## ಸುತ್ತೋಲೆ

**ವಿಷಯ: ವಿಶ್ವ ಕೌಶಲ್ಯ ದಿನಾಚರಣೆಯ ಪ್ರಯುಕ್ತ "ಕೌಶಲ್ಯ ಸ್ಫೂರ್ತಿ" ಕಾರ್ಯಕ್ರಮದಡಿ ಪ್ರಬಂಧ ಸ್ಪರ್ಧೆಗೆ ಭಾಗವಹಿಸುವ ಕುರಿತು.**

ಉಲ್ಲೇಖ: 1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಪತ್ರ ಸಂಖ್ಯೆ:ಕೌಉಜೀಇ 55 ಕೌಗುಇ 2022, ದಿನಾಂಕ:27–06–2022.
2. ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ, ಶಿವಮೊಗ್ಗ ಇವರ ಪತ್ರ ಸಂಖ್ಯೆ: ಜಿಕೌಅಶಿ/2022–23, ದಿನಾಂಕ:29–06–2022.

*****

ಉಲ್ಲೇಖಿತ (1)ರ ಸರ್ಕಾರದ ನಿರ್ದೇಶನದನುಸಾರ ಉಲ್ಲೇಖಿತ (2)ರಲ್ಲಿ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ, ಶಿವಮೊಗ್ಗ – ಇವರು ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಹಲವಾರು ಮಹತ್ವಾಕಾಂಕ್ಷಿ ಕೌಶಲ್ಯಾಧಾರಿತ ಯೋಜನೆಗಳನ್ನು ರಾಜ್ಯದ ಯುವ ಜನತೆಗಾಗಿ ಪರಿಚಯಿಸಿ, ಜಾರಿಗೊಳಿಸಿ, ಕೌಶಲ್ಯದೊಂದಿಗೆ ಉದ್ಯಮಶೀಲರನ್ನಾಗಿಸುವ ನಿಟ್ಟಿನಲ್ಲಿ ದಿನಾಂಕ:15–07–2022 ರಂದು **"ವಿಶ್ವ ಯುವ ಕೌಶಲ್ಯ"** ದಿನಾಚರಣೆಯನ್ನು ಆಚರಿಸುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಸಲುವಾಗಿ ವಿಶ್ವವಿದ್ಯಾಲಯದ ವ್ಯಾಪ್ತಿಯ ಸ್ನಾತಕೋತ್ತರ ವಿಭಾಗಗಳು / ಸ್ನಾತಕ ಕಾಲೇಜುಗಳ ಆಸಕ್ತ ವಿದ್ಯಾರ್ಥಿಗಳಿಗೆ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ತಿಳಿಸಲು ಎಲ್ಲಾ ವಿಭಾಗಾಧ್ಯಕ್ಷರುಗಳಿಗೆ / ಎಲ್ಲಾ ಪ್ರಾಂಶುಪಾಲರುಗಳಿಗೆ ಈ ಮೂಲಕ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ (2)ರ ಪತ್ರವನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ.

ಉಪಕುಲಸಚಿವರು
ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ–577451.
ಶಿವಮೊಗ್ಗ ಜಿಲ್ಲೆ.

7/7/2022

ಗೆ,

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು/ ಸಂಯೋಜನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
2. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಕಡೂರು/ ಚಿಕ್ಕಮಗಳೂರು.
3. ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳು, ಶಿವಮೊಗ್ಗ ಮತ್ತು ನೇರ ಆಡಳಿತಕ್ಕೊಳಪಟ್ಟ ಕಾಲೇಜು, ಶಂಕರಘಟ್ಟ.

ಪ್ರತಿಗಳು:

1. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ,
ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಛೇರಿ,
ನಂ. 303/528, ಶಾಂತಲ ಟವರ್ಸ್, 2ನೇ ಮಹಡಿ, 3ನೇ ಅಡ್ಡರಸ್ತೆ, ನೆಹರುರಸ್ತೆ, ಗಾರ್ಡನ್ ಏರಿಯಾ, ಶಿವಮೊಗ್ಗ-577 201

E-mail ID:-dsdosmg@gmail.com Phone No:- 08182-255294

ಸಂಖ್ಯೆ: ಜಿಕೌಅಶಿ/2022-23 ದಿನಾಂಕ: 29/06/2022

ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ
04 JUL 2022
ಶಂಕರಘಟ್ಟ-577451
ನಂ. 2356

ಗೆ,

ಮಾನ್ಯ ಕುಲಸಚಿವರು,
ಕುವೆಂಪು ವಿಶ್ವವಿದ್ಯಾಲಯ,
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ,
ಶಿವಮೊಗ್ಗ-577451

ಮಾನ್ಯರೇ,

ವಿಷಯ: **ವಿಶ್ವ ಕೌಶಲ್ಯ ದಿನಾಚರಣೆಯ ಪ್ರಯುಕ್ತ "ಕೌಶಲ್ಯ ಸ್ಫೂರ್ತಿ" ಕಾರ್ಯಕ್ರಮದಡಿ ಪ್ರಬಂಧ ಸ್ಪರ್ಧೆ ಏರ್ಪಡಿಸುವ ಕುರಿತು.**
ಉಲ್ಲೇಖ: ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಪತ್ರ ಸಂಖ್ಯೆ: ಕೌಉಜೀಇ 55 ಕೌಗುಇ 2022 ದಿನಾಂಕ:27.06.2022

*****

ಮೇಲ್ಕಂಡ ಉಲ್ಲೇಖಿತ ವಿಷಯಕ್ಕೆ ಸಂಬಂಧಿಸಿದಂತೆ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಹಲವಾರು ಮಹತ್ವಾಕಾಂಕ್ಷಿ ಕೌಶಲ್ಯಾಧಾರಿತ ಯೋಜನೆಗಳನ್ನು ರಾಜ್ಯದ ಯುವ ಜನತೆಗಾಗಿ ಪರಿಚಯಿಸಿ, ಜಾರಿಗೊಳಿಸಿ, ಕೌಶಲ್ಯದೊಂದಿಗೆ ಉದ್ಯಮಶೀಲರನ್ನಾಗಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗಿದ್ದು, ದಿನಾಂಕ: 15.07.2022 ರಂದು **"ವಿಶ್ವ ಯುವ ಕೌಶಲ್ಯ"** ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಇದರ ಪ್ರಯುಕ್ತ ಜಾಗೃತಿ ಮೂಡಿಸುವ ಸಲುವಾಗಿ ಜಿಲ್ಲೆಯ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಯನ್ನು **"ಕೌಶಲ್ಯ ಸ್ಫೂರ್ತಿ"** ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳ ಆದೇಶದಂತೆ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೋರುತ್ತಾ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ (ಸರ್ಕಾರಿ, ಅರೆಸರ್ಕಾರಿ ಹಾಗೂ ಖಾಸಗಿ) ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾಲೇಜುಗಳ ಪ್ರಾಂಶುಪಾಲರಿಗೆ ಮಾಹಿತಿ ತಿಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಈ ಮೂಲಕ ಕೋರಲಾಗಿದೆ.

ಈ ಪ್ರಬಂಧ ಸ್ಪರ್ಧೆಯು ಡಿಪ್ಲೋಮಾ, ಪದವೀಧರ ಹಾಗೂ ಸ್ನಾತಕೋತ್ತರ ಪದವೀಧರ ಅಭ್ಯರ್ಥಿಗಳಿಗೆ ಏರ್ಪಡಿಸಲಾಗಿದ್ದು, ನೀಡುತ್ತಿರುವ ವಿಷಯದ ವಿವರ ಈ ಕೆಳಗಿನಂತಿದೆ.

Library + circulate to all dept.

1. ಕೈಗಾರಿಕೆ-ಶೈಕ್ಷಣಿಕ ಒಗ್ಗೂಡಿಕೆಯಿಂದ ಕೌಶಲ್ಯದ ಅಂತರವನ್ನು ಕಡಿಮೆ ಮಾಡುವುದು.
   Industry Academy Convergence "Bridging the Skill Gap"
2. ಶಕ್ತಿಯುತ ಹಾಗೂ ಸುಸ್ಥಿರ ಬೆಳವಣಿಗೆಗಾಗಿ ಕೌಶಲ್ಯಯುತ ಮಾನವ ಸಂಪನ್ಮೂಲವನ್ನು ಸೃಷ್ಟಿಸುವ ಮಾರ್ಗಗಳು.
   Ways to create Skilled workforce for strong and sustainable growth.
3. ಕೌಶಲ್ಯ ಮತ್ತು ಸಾಮರ್ಥ್ಯಗಳ ಮೇಲೆ ಕೇಂದ್ರಿಕೃತವಾದ ಉನ್ನತ ಶಿಕ್ಷಣದ, ಬಗ್ಗೆ ಮರುಚಿಂತನೆ.
   Rethinking Higher Education, Focussing on Skills and Competencies.

ಈ ಮೇಲ್ಕಂಡ ಯಾವುದಾದರೊಂದು ವಿಷಯದ ಬಗ್ಗೆ ಪ್ರಬಂಧ ಬರೆದು **ಸಲ್ಲಿಸಲು ಕೊನೆಯ ದಿನಾಂಕ: 10.07.2022.**

ಭಾಗವಹಿಸುವ ವಿದ್ಯಾರ್ಥಿಗಳು https://www.kaushalkar.com/app/skill-essay-competition ಲಿಂಕ್‌ನಡಿ ನೋಂದಾಯಿಸಲು ಹಾಗೂ ಮೇಲೆ ನಮೂದಿಸಿರುವ ಯಾವುದಾದರೂ ಒಂದು ವಿಷಯದ ಕುರಿತು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಪ್ರಬಂಧ ಬರೆದು (1000-1200 ಪದಗಳಿಗೆ ಮೀರದಂತೆ) ಸಲ್ಲಿಸಲು ಅವಕಾಶ ಕಲ್ಪಿಸಿದೆ.

ರಾಜ್ಯ ಮಟ್ಟದಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ **ಮೊದಲನೇ ಬಹುಮಾನ ರೂ. 15000/-ಗಳು, ಎರಡನೇ ಬಹುಮಾನ ರೂ. 10000/-ಗಳು** ಹಾಗೂ **ಮೂರನೇ ಬಹುಮಾನ ರೂ. 5000/-ಗಳ** ನಗದು ಪುರಸ್ಕಾರ ಹಾಗೂ ಜಿಲ್ಲಾ ಮಟ್ಟದಲ್ಲಿ ವಿಜೇತರಾದ ಅಭ್ಯರ್ಥಿಗೆ ಜಿಲ್ಲೆಯ **"ಜಿಲ್ಲಾಧಿಕಾರಿಯೊಂದಿಗೆ ಒಂದು ದಿನ"** ಕಾರ್ಯಕ್ರಮದಡಿ ಜಿಲ್ಲಾಧಿಕಾರಿಗಳೊಂದಿಗೆ ಇದ್ದು, ಅವರ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗುವ ಅವಕಾಶ ಕಲ್ಪಿಸಿದ್ದು, ಸಂಬಂಧಪಟ್ಟ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

AC
AC. UCCF
AC-SL
5/7/22

ತಮ್ಮ ವಿಶ್ವಾಸಿ,
Suresh
ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ
ಶಿವಮೊಗ್ಗ, ಶಿವಮೊಗ್ಗ ಜಿಲ್ಲೆ.

5/7/2022
6/7/22 6/7/22 6/7/22

ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕೌಶಲ ಕರ್ನಾಟಕ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ
ಕರ್ನಾಟಕ ಸರ್ಕಾರ

ಅ.ಸ.ಪತ್ರ ಸಂಖ್ಯೆ: ಕೌಉಜೀಇ 55 ಕೌಗುಇ 2022 ದಿನಾಂಕ: 27.06.2022

ಪ್ರಿಯ ಡಾ॥ ಸೆಲ್ವಮಣಿ ರವರೆ,

ವಿಷಯ: "ವಿಶ್ವ ಯುವ ಕೌಶಲ್ಯ" ದಿನಾಚರಣೆಯ ಅಂಗವಾಗಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ "ಕೌಶಲ್ಯ ಸ್ಫೂರ್ತಿ" ಶೀರ್ಷಿಕೆ ಅಡಿಯಲ್ಲಿ "ಜಿಲ್ಲಾಧಿಕಾರಿಗಳೊಂದಿಗೆ ಒಂದು ದಿನ" ಎಂಬ ಕಾರ್ಯಕ್ರಮ ಆಯೋಜಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಹಲವಾರು ಮಹತ್ವಾಕಾಂಕ್ಷಿ ಕೌಶಲ್ಯಾಧಾರಿತ ಯೋಜನೆಗಳನ್ನು ರಾಜ್ಯದ ಯುವ ಜನತೆಗಾಗಿ ಪರಿಚಯಿಸಿ, ಜಾರಿಗೊಳಿಸಿ, ಕೌಶಲ್ಯದೊಂದಿಗೆ ಉದ್ಯಮಶೀಲರನ್ನಾಗಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದ್ದು, ದಿನಾಂಕ:15.07.2022 ರಂದು "ವಿಶ್ವ ಯುವ ಕೌಶಲ್ಯ" ದಿನಾಚರಣೆಯನ್ನು ಆಚರಿಸುತ್ತಿದೆ. ಕೌಶಲ್ಯದ ಅವಶ್ಯಕತೆ ಹಾಗೂ ಪ್ರಾಮುಖ್ಯತೆಯ ಕುರಿತಂತೆ ಜಾಗೃತಿ ಮೂಡಿಸುವ, ಪ್ರೋತ್ಸಾಹ ನೀಡುವ ಮತ್ತು ವ್ಯಾಪಕ ಪ್ರಚಾರ ನಡೆಸುವ ನಿಟ್ಟಿನಲ್ಲಿ ಈ ಪತ್ರಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವ ವಿಷಯಗಳ ಪ್ರಬಂಧ ಸ್ಪರ್ಧೆಯನ್ನು "ಕೌಶಲ್ಯ ಸ್ಫೂರ್ತಿ" ಕಾರ್ಯಕ್ರಮದಡಿ ಏರ್ಪಡಿಸಲಾಗಿರುತ್ತದೆ.

ಪ್ರತಿ ಜಿಲ್ಲೆಯ ವಿಜೇತ ಅಭ್ಯರ್ಥಿಗಳಿಗೆ ಆಯಾ ಜಿಲ್ಲೆಗಳ "ಜಿಲ್ಲಾಧಿಕಾರಿಗಳೊಂದಿಗೆ ಒಂದು ದಿನ" ಕಾರ್ಯಕ್ರಮದಡಿ, ಜಿಲ್ಲಾಧಿಕಾರಿಗಳೊಂದಿಗೆ ಇದ್ದು, ಅವರ ಎಲ್ಲ ಕಾರ್ಯ ಚಟುವಟಿಕೆಗಳಲ್ಲಿ ಭಾಗಿಯಾಗುವ ಅವಕಾಶ ಕಲ್ಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ತಮ್ಮ ದೈನಂದಿನ ಕಚೇರಿ ಕಾರ್ಯಗಳಲ್ಲಿ ಹಾಗೂ ಕಾರ್ಯ ಚಟುವಟಿಕೆಗಳಲ್ಲಿ ವಿಜೇತ ಅಭ್ಯರ್ಥಿಗಳನ್ನು ಒಂದು ದಿನದ ಮಟ್ಟಿಗೆ ತೊಡಗಿಸಿಕೊಂಡು ಪ್ರೋತ್ಸಾಹಿಸಬೇಕೆಂದು ಈ ಮೂಲಕ ಕೋರುತ್ತೇನೆ.

ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ,

ಡಾ॥ ಸೆಲ್ವಮಣಿ. ಆರ್, ಭಾಆಸೇ,
ಜಿಲ್ಲಾಧಿಕಾರಿ,
ಶಿವಮೊಗ್ಗ ಜಿಲ್ಲೆ,
ಶಿವಮೊಗ್ಗ.

ಕೊಠಡಿ ಸಂಖ್ಯೆ 347, 2ನೇ ಹಂತ, 3ನೇ ಮಹಡಿ, ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ: ಕಛೇರಿ 080-22253724, 22032996
ಇ-ಮೇಲ್ acs.skill@karnataka.gov.in / Website www.kaushalkar.com

## ಅನುಬಂಧ

ಅ) ಡಿಪ್ಲೋಮಾ, ಪದವಿಪೂರ್ವ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಷಯ ಶೀರ್ಷಿಕೆ:-

**For Diploma, Under graduates and Post Graduates:-**

1. ಕೈಗಾರಿಕೆ - ಶೈಕ್ಷಣಿಕ ಒಗ್ಗೂಡಿಕೆಯಿಂದ ಕೌಶಲ್ಯದ ಅಂತರವನ್ನು ಕಡಿಮೆ ಮಾಡುವುದು.

   Industry Academia Convergence "Bridging the Skill Gap".

2. ಶಕ್ತಿಯುತ ಹಾಗೂ ಸುಸ್ಥಿರ ಬೆಳವಣಿಗೆಗಾಗಿ ಕೌಶಲ್ಯಯುತ ಮಾನವ ಸಂಪನ್ಮೂಲವನ್ನು ಸೃಷ್ಟಿಸುವ ಮಾರ್ಗಗಳು.

   Ways to create skilled workforce for strong and sustainable growth.

3. ಕೌಶಲ್ಯ ಮತ್ತು ಸಾಮರ್ಥ್ಯಗಳ ಮೇಲೆ ಕೇಂದ್ರಿಕೃತವಾದ ಉನ್ನತ ಶಿಕ್ಷಣದ, ಬಗ್ಗೆ ಮರುಚಿಂತನೆ

   Rethinking Higher Education, Focussing on skills and competencies.

*8 ರಿಂದ 12 ನೇ ತರಗತಿ/ ಐಟಿಐ ವಿದ್ಯಾರ್ಥಿಗಳಿಗೆ*

***For Class 8 to 12 / ITI Students:***

1. ಯುವಕರಲ್ಲಿ ಕೌಶಲ್ಯಾಭಿವೃದ್ಧಿಯ ಪ್ರಾಮುಖ್ಯತೆ.

   Importance of Skill building in Youth.

2. ಶಿಕ್ಷಣದಲ್ಲಿ ಕೌಶಲ್ಯಾಭಿವೃದ್ಧಿಯ ಪ್ರಾಮುಖ್ಯತೆ

   Importance of Skill Development in Education.